ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಕುಮಟಾ.

ಸಿಸಿ ನಂ. 288/2023

ಫಿರ್ಯಾದಿ | ಆರೋಪಿ

ದಿ ಸೈಂಟ್ ಮಿಲಾಗ್ರಿಸ್‌ಕ್ರೆಡಿಟ್ ಸೌಹಾರ್ದ ಕೋ–ಆಪ್ ಲಿ.ಕಾರವಾರ ವಿರುದ್ಧ ಗಣಪತಿ ಕೃಷ್ಣ ಅಂಬಿಗ
ಶಾಖೆ ಕುಮಟಾ.

ಆರೋಪಿಃ

ಗಣಪತಿ ಕೃಷ್ಣ ಅಂಬಿಗ ,
ಸೆಂಟರಿಂಗ ಕೆಲಸ, ಸಾಃ ಕಲಬಾವಿ, ಮಾಸೂರ, ಕುಮಟಾ.

– ದಂಡ ಪ್ರಕ್ರಿಯಾ ಸಂಹಿತೆ ಕಲಂ.251 ರಡಿ ಆಪಾದನೆ –

ದಿಃ 08-01-2021 ರಂದು ಶ್ರೀಮತಿ ಸುಲೋಚನಾ ಗಣಪತಿ ಅಂಬಿಗ ಇವರು ಫಿರ್ಯಾದುದಾರ ಸಹಕಾರಿಯಿಂದ ರೂ. 80,000/- ಸಾಲವನ್ನು ಪಡೆದಿದ್ದು, ಸದರಿ ಸಾಲಕ್ಕೆ ನೀವು ಜಾಮೀನುದಾರರಾಗಿದ್ದು, ಸದರಿ ಸಾಲವು ಕಟ್ ಬಾಕಿಯಾಗಿರುವುದರಿಂದ ಸದರಿ ಸಾಲದ ತೀರುವಳಿಯ ಸಲುವಾಗಿ ನೀವು ದಿಃ 16-05-2022 ರಂದು ಫಿರ್ಯಾದುದಾರರಿಗೆ ನಿಮ್ಮ ಖಾತೆ ಇರುವ ಕುಮಟಾ ಶಾಖೆಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಚೆಕ್ ನಂ. 145508 ರೂ. 98,000/- ನೇದರ ಚೆಕ್ ನ್ನು ನೀಡಿದ್ದು , ಸದರಿ ಚೆಕ್ ನ್ನು ದಿಃ 20-05-2022 ರಂದು ನಗದೀಕರಿಸಲು ಕುಮಟಾ ಶಾಖೆಯ ಕರ್ನಾಟಕ ಬ್ಯಾಂಕ್ ಲಿ.,ಗೆ ಹಾಜರು ಪಡಿಸಿದಾಗ ದಿಃ 23-05-2022 ರಂದು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಜಮಾ ಇಲ್ಲ ಎಂಬ ಹಿಂಬರಹದೊಂದಿಗೆ ವಾಪಸ್ಸು ಬಂದಿದ್ದು , ಈ ಕುರಿತು ನಿಮಗೆ ದಿಃ 14-06-2022 ರಂದು ವಕೀಲರ ಮುಖಾಂತರ ನೋಂದಾಯಿತ ಅಂಚೆ ನೋಟಿಸು ನೀಡಿದ್ದು, ಸದರಿ ನೋಟಿಸು ನಿಮಗೆ ದಿಃ 21-06-2022 ರಂದು ಜಾರಿಯಾಗಿದ್ದರೂ ಸಹ, ನೀವು ಸದರಿ ಚೆಕ್ ನಲ್ಲಿ ಹೇಳಿರುವ ಹಣವನ್ನು ವಾಪಸ್ಸು ಕೊಡದೇ ಕಲಂ 138 ಎನ್ ಐ ಆಕ್ಟ ನೇದರ ಪ್ರಕಾರ ಅಪರಾಧ ಮಾಡಿರುತ್ತೀರೆಂದು ನಿಮ್ಮ ಮೇಲೆ ಆಪಾದನೆ ಇದೆ, ಅದಕ್ಕೆ ಏನು ಹೇಳುತ್ತೀರಿ?

**ಪ್ರಶ್ನೆ – 1** ನಿಮ್ಮ ಮೇಲೆ ಹೊರಿಸಲಾದ ಆಪಾದನೆಯನ್ನು ಕೇಳಿದಿರಾ? ಅದು ನಿಮಗೆ ತಿಳಿಯಿತೇ?

ಉತ್ತರ –

**ಪ್ರಶ್ನೆ – 2** ನಿಮ್ಮ ಮೇಲೆ ಹೊರಿಸಲಾದ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ ? ಅಥವಾ ಪ್ರತಿ ರಕ್ಷೆ ಇದೆಯೆ?

ಉತ್ತರ –

ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು. ಇದರಲ್ಲಿನ ಎಲ್ಲ ಅಂಶಗಳನ್ನು ಈ ಕಡತವು ಪೂರ್ಣವಾಗಿ ಒಳಗೊಂಡಿರುತ್ತದೆ.

ಸ್ಥಳಃ ಕುಮಟಾ<br>
ದಿಃ 21-11-2023.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು<br>
ಪ್ರಧಾನ ಪ್ರ.ದ.ನ್ಯಾ.ದಂ., ಕುಮಟಾ